ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ, ಮಹಾರಾಷ್ಟ್ರ

[ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಭಾ. ಕೃ. ಅ. ಪ.), ಕೃಷಿ ಮಂತ್ರಾಲಯ, ಭಾರತ ಸರ್ಕಾರ]

ಹತ್ತಿ ಬೆಳೆಯ ಸಾಪ್ತಾಹಿಕ ಸಲಹೆ, 29 ಅಕ್ಟೋಬರ್ ರಿಂದ 4 ನವೆಂಬರ್ 2026 ರ ಅವಧಿಗೆ

"ಈ ಸಲಹೆಯು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"

ಅ. ಮಣ್ಣಿನ ಆರೋಗ್ಯ, ಪೋಷಣೆ, ಹಾಗೂ ಕೀಟ ಮತ್ತು ರೋಗ ನಿರ್ವಹಣೆಯ ಕುರಿತಾದ ಸಾಮಾನ್ಯ ಸಲಹೆ

ಹೆಚ್ಚಿನ ಹತ್ತಿ ಇಳುವರಿಯು ಸಮತೋಲಿತ ಮಣ್ಣಿನ ಪೋಷಣೆ, ನೀರಿನ ನಿರ್ವಹಣೆ ಮತ್ತು ಪೂರ್ವಭಾವಿ ನಿರೀಕ್ಷಣೆ ಆಧಾರಿತ ಕೀಟ ಮತ್ತು ರೋಗ ನಿರ್ವಹಣೆಯನ್ನು ಅವಲಂಬಿಸಿದೆ. ಸಂಪೂರ್ಣ ಮತ್ತು ಸಮಗ್ರ ಬೆಳೆ ನಿರ್ವಹಣಾ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಸರಿಯಾದ ಬೆಳವಣಿಗೆ ಮತ್ತು ಚೈತನ್ಯವನ್ನು ಖಚಿತಪಡಿಸುವುದರೊಂದಿಗೆ ಬೇಸಾಯ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇದಲ್ಲದೇ, ಬೆಳೆಯನ್ನು ವಿನಾಶಕಾರಿ ಕೀಟ ಮತ್ತು ರೋಗ ಹಾನಿಯಿಂದ ರಕ್ಷಿಸುತ್ತದೆ.

ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶ ನಿರ್ವಹಣೆ (INM)

- **ಸೂಕ್ಷ್ಮ ಪೋಷಕಾಂಶಗಳನ್ನು ಅತ್ಯುತ್ತಮವಾಗಿಸಿ:** ಬೆಳೆ ತಿರುಗುವಿಕೆ, ಸಾವಯವ ಗೊಬ್ಬರ ಮತ್ತು ಹೊದಿಕೆ ಬೆಳೆಗಳಿಗೆ ಆದ್ಯತೆ ನೀಡುವ ಮೂಲಕ ಮತ್ತು ಬಿತ್ತನೆ ಪೂರ್ವ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ತರ್ಕಬದ್ಧ ರಾಸಾಯನಿಕ ಗೊಬ್ಬರವನ್ನು ಬಳಸುವ ಮೂಲಕ ಮಣ್ಣಿನ ಆರೋಗ್ಯವನ್ನು ಸುಧಾರಿಸಿ.

- **ಸೂಕ್ಷ್ಮ ಪೋಷಕಾಂಶಗಳನ್ನು ಅನ್ವಯಿಸಿ:** ಅಗತ್ಯವಿರುವಂತೆ ಉದ್ದೇಶಿತ ಸಿಂಪಡಣೆಗಳ ಮೂಲಕ ದ್ವಿತೀಯ ಮತ್ತು ಸೂಕ್ಷ್ಮ ಪೋಷಕಾಂಶಗಳ ಕೊರತೆಗಳನ್ನು (ಸತು, ಬೋರಾನ್, ಮ್ಯಾಂಗನೀಸ್ ಮತ್ತು ಮೆಗ್ನೀಸಿಯಮ್‌ನಂತಹ) ಪೂರ್ವಭಾವಿಯಾಗಿ ಪರಿಹರಿಸಿ.

ರೋಗ ನಿರ್ವಹಣೆ (IDM)

- **ರೋಗ ತಡೆಗಟ್ಟುವ ಪದ್ಧತಿಗಳನ್ನು ನಿಯೋಜಿಸಿ:** ಮಣ್ಣಿನಿಂದ ಹರಡುವ ಮತ್ತು ಎಲೆಗಳಿಂದ ಹರಡುವ ರೋಗಕಾರಕಗಳ ನಿರ್ವಹಣೆಯನ್ನು ಸಮಗ್ರ ಕೃಷಿ ಪದ್ಧತಿಗಳ ಮೂಲಕ ಸಾಧಿಸಬೇಕು, ಇದರಲ್ಲಿ ಸರಿಯಾದ ಕ್ಷೇತ್ರ ನೈರ್ಮಲ್ಯ, ಜೈವಿಕ ಕೀಟನಾಶಕಗಳು ಮತ್ತು ಜೈವಿಕ ಗೊಬ್ಬರಗಳನ್ನು ಬೀಜ ಮತ್ತು ಮಣ್ಣಿನ ಉಪಚಾರಗಳಾಗಿ ಅನ್ವಯಿಸುವುದು, ಸಸ್ಯ ಆರೋಗ್ಯವನ್ನು ಹೆಚ್ಚಿಸಲು ಮತ್ತು ರೋಗದ ಸಂಭವವನ್ನು ನಿಗ್ರಹಿಸಲು ಸಹಾಯ ಮಾಡುತ್ತದೆ.
- **ಏಕಾಏಕಿ ರೋಗ ಪ್ರಸಾರ ನಿಯಂತ್ರಣ:** ಹೆಚ್ಚಿನ ಆರ್ದ್ರತೆಯ ಅವಧಿಯಲ್ಲಿ ನಿಯಮಿತ ಕ್ಷೇತ್ರ ಮೇಲ್ವಿಚಾರಣೆಯನ್ನು ಕೈಗೊಳ್ಳಬೇಕು ಮತ್ತು ಚಾಲ್ತಿಯಲ್ಲಿರುವ ಪರಿಸರ ಪರಿಸ್ಥಿತಿಗಳು ತ್ವರಿತ ರೋಗ ಬೆಳವಣಿಗೆ ಮತ್ತು ಹರಡುವಿಕೆಗೆ ಅನುಕೂಲಕರವಾದಾಗ ಮಾತ್ರ ಶಿಫಾರಸು ಮಾಡಲಾದ ಶಿಲೀಂಧ್ರನಾಶಕಗಳನ್ನು ವಿವೇಚನೆಯಿಂದ ಅನ್ವಯಿಸಬೇಕು.

ಸಮಗ್ರ ಕೀಟ ನಿರ್ವಹಣೆ (IPM)

- ಕ್ಷೇತ್ರ ಶೋಧನೆ ನಡೆಸುವುದು: ಕಾಯಿಕೊರಕಗಳ ಜೊತೆಗೆ ರಸ ಹೀರುವ ಕೀಟಗಳನ್ನು (ಥ್ರಿಪ್ಸ್ ನುಸಿ , ಹೇನು, ಜಿಗಿ ಹುಳುಗಳು, ಮತ್ತು ಜೇಡ ಹುಳಗಳು) ನಿರೀಕ್ಷಣೆ ಮಾಡಲು ವಾರಕ್ಕೊಮ್ಮೆ ಕ್ಷೇತ್ರ ಶೋಧನೆ ಮಾಡಿ.
- ಜಿಗುಟು ಬಲೆ ಮತ್ತು ಜೈವಿಕ ಕೀಟನಾಶಕಗಳನ್ನು ಬಳಸಿ: ವಯಸ್ಕ ಪತಂಗಗಳ ಹಾರಾಟವನ್ನು ಪತ್ತೆಹಚ್ಚಲು ಹಾಗೂ ಮೊಟ್ಟೆ ಇಡುವ ಚಕ್ರಗಳನ್ನು ಊಹಿಸಲು ಋತುವಿನ ಆರಂಭದಲ್ಲಿ ಲಿಂಗಾಕರ್ಷಕ ಬಲೆಗಳನ್ನು ನೆಡಬೇಕು. ಪ್ರಾಥಮಿಕ ಪ್ರತಿಕ್ರಿಯೆಯಾಗಿ ಸಾವಯವ, ನೈಸರ್ಗಿಕ ಅಥವಾ ಸಸ್ಯ ಆಧಾರಿತ ಕೀಟನಾಶಕಗಳನ್ನು ಸಿಂಪಡಿಸಬೇಕು.
- ನೈಸರ್ಗಿಕ ಮಿತ್ರಕೀಟಗಳನ್ನು ಸಂರಕ್ಷಿಸಿ: ವ್ಯಾಪಕ ವ್ಯಾಪ್ತಿಯ ರಾಸಾಯನಿಕಗಳಿಗಿಂತ ನಿರ್ದಿಷ್ಟ ಕೀಟನಾಶಕಗಳನ್ನು ಆರಿಸುವ ಮೂಲಕ ಮಿತ್ರ ಕೀಟಗಳ ಸಂರಕ್ಷಣೆ ಮಾಡಬೇಕು.
- ರಾಸಾಯನಿಕ ಬಳಕೆ ನಿರ್ಬಂಧಿಸಿ: ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಠ ಮಿತಿಯನ್ನು ತಲುಪಿದಾಗ ಮಾತ್ರ, ಲೇಬಲ್-ಶಿಫಾರಸು ಮಾಡಿದ ರಾಸಾಯನಿಕ ಕೀಟನಾಶಕಗಳನ್ನು ಕೊನೆಯ ಉಪಾಯವಾಗಿ ಬಳಸಬೇಕು.

ಬ. ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದ ಸಲಹೆ

ಕರ್ನಾಟಕ	ಕಳೆದ ವಾರದಲ್ಲಿ ಬಿದ್ದ ಮಳೆಯ ವಿವರ (ಮಿ.ಮೀ)						IMDಯ ಪ್ರಕಾರ ಮಳೆಯ ಮುನ್ಸೂಚನೆ (ಮಿ.ಮೀ)					
ತಿಂಗಳು	ಅಕ್ಟೋಬರ್/ ನವೆಂಬರ್											
ದಿನಾಂಕ	20	21	22	23	24	25	26	28	29	30	31	01
ಧಾರವಾಡ	0	0	0	0	18.6	0	0	0	0.1	0.6	0.1	0.1
ಹಾವೇರಿ	0	0	0	0	13	0	0	0	0	0.3	0	0.1
ಮೈಸೂರು	0	0	0	0	29	43	0	0	0	0	0	0

ಮಳೆಯ ಮಾಹಿತಿಯ ಮಾದರಿ						ಮಳೆಯ ಮಾಹಿತಿಯ ಮೂಲ:
ಮಳೆಯ ಪ್ರಮಾಣ (ಮಿ.ಮೀ)	0.1-2.4	2.5-15.5	15.6-64.4	64.5-115.5	115.6-204.4	http://nwp.imd.gov.in/bias/dist_fcst.htm

ಬೆಳೆಯ ಸ್ಥಿತಿ:

ಧಾರವಾಡದಲ್ಲಿ, ಬೆಳೆಯು ಕಾಯಿಗಳ ಬೆಳವಣಿಗೆ/ಕಾಯಿಗಳು ಒಡೆಯುವಿಕೆ/ಮೊದಲ ಕಟಾವಿನ ಹಂತದಲ್ಲಿದೆ. ಕೆಲವು ಹೊಲಗಳಲ್ಲಿ ಕಳೆಗಳ ಬಾಧೆ ಕಂಡುಬಂದಿದೆ. ಥ್ರಿಪ್ಸ್ (ನುಸಿ) ಬಾಧೆ ಕಡಿಮೆ ಪ್ರಮಾಣದಲ್ಲಿದೆ; ಎಲೆ ಜಿಗಿ ಹುಳುಗಳ ಬಾಧೆ ಕಡಿಮೆ ಅಥವಾ ಮಧ್ಯಮ ಪ್ರಮಾಣದಲ್ಲಿದ್ದು, ಹೇನುಗಳು ಮತ್ತು ಮಿರಿಡ್ ತಿಗಣೆಗಳ ಬಾಧೆ ಮಧ್ಯಮ ಪ್ರಮಾಣದಲ್ಲಿದೆ. ಗುಲಾಬಿ ಕಾಯಿ ಕೊರಕದ ಪತಂಗಗಳ ಸಂಖ್ಯೆ ಆರ್ಥಿಕ ಹಾನಿ ಮಟ್ಟಕ್ಕಿಂತ ಕಡಿಮೆಯಿದೆ. ಕೆಲವು ಹೊಲಗಳಲ್ಲಿ ಆಲ್ಟರ್ನೇರಿಯಾ ಎಲೆ ಚುಕ್ಕೆ ರೋಗ ಕಡಿಮೆ ಅಥವಾ ಮಧ್ಯಮ ಪ್ರಮಾಣದಲ್ಲಿ ವರದಿಯಾಗಿದೆ ಮತ್ತು ಸೊರಗು ರೋಗ ಕಡಿಮೆ ಪ್ರಮಾಣದಲ್ಲಿದೆ.

ರಾಯಚೂರಿನಲ್ಲಿ, ಬಿತ್ತನೆ ಮಾಡಿದ ಬೆಳೆಯು 122 ದಿನಗಳ ಹಂತದಲ್ಲಿದ್ದು, ಕಾಯಿಗಳು ಅಭಿವೃದ್ಧಿಯಾಗಿ, ಪಕ್ವವಾಗುವ ಹಂತದಲ್ಲಿದೆ. ಈ ಹಂತದಲ್ಲಿ ಬೆಳೆಗಳ ನಡುವೆ ಕೈಗೊಳ್ಳಬೇಕಾದ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ ಕೀಟನಾಶಕಗಳನ್ನು ಸಿಂಪಡಿಸಲಾಗಿದೆ. ಕಳೆಗಳು, ಕೀಟಗಳು ಮತ್ತು ರೋಗಗಳು ವಿವಿಧ ಪ್ರಮಾಣಗಳಲ್ಲಿ ಕಂಡುಬಂದಿವೆ. ಬೆಳೆ ಸಂರಕ್ಷಣೆಗೆ ಶಿಫಾರಸು ಮಾಡಲಾದ ಪದ್ಧತಿಗಳನ್ನು ಅನುಸರಿಸಿ, ಕಂಡುಬಂದಿರುವ ಸಮಸ್ಯೆಗಳಿಗೆ ಅನುಗುಣವಾಗಿ ಮತ್ತು ಅಗತ್ಯಕ್ಕೆ ತಕ್ಕಂತೆ ಸೂಕ್ತ ಸಮಯದಲ್ಲಿ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳುವಂತೆ ರೈತರಿಗೆ ಸಲಹೆ ನೀಡಲಾಗಿದೆ.

ಚಾಮರಾಜನಗರದಲ್ಲಿ ಬೆಳೆಯು ಕಟಾವಿನ ಹಂತದಲ್ಲಿದೆ. ಹತ್ತಿ ಬಿಡಿಸುವ ಕಾರ್ಯ ಪ್ರಗತಿಯಲ್ಲಿದೆ.

ಸಲಹೆ:

ಧಾರವಾಡದಲ್ಲಿ, ರೈತರು ಕಳೆಗಳನ್ನು ನಿರ್ವಹಿಸಲು ಕೈಯಿಂದ ಕಳೆ ತೆಗೆಯುವುದು ಮತ್ತು ಅಂತರ ಕೃಷಿ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಸೀಮಿತ ನೀರಾವರಿ ಸೌಲಭ್ಯದ ಸ್ಥಿತಿಯಲ್ಲಿ ಹೂಬಿಡುವ ಮತ್ತು ಕಾಯಿ ಬೆಳವಣಿಗೆಯ ಹಂತದಲ್ಲಿ ಒಂದು ಅನಿವಾರ್ಯ ನೀರಾವರಿ ಒದಗಿಸಿ. ದೀರ್ಘಕಾಲದ ಶುಷ್ಕತೆಯಿಂದಾಗಿ ಬೆಳೆ ತೇವಾಂಶದ ಒತ್ತಡದಿಂದ ಬಳಲುತ್ತಿದ್ದರೆ, 10 ದಿನಗಳ ಮಧ್ಯಂತರದಲ್ಲಿ 150 ರಿಂದ 200 ಲೀಟರ್ ನೀರಿನಲ್ಲಿ ಎಕರೆಗೆ 2 ಕೆಜಿಯಂತೆ 13:00:45 ರ ಎರಡು ಸಿಂಪಡಣೆಗಳನ್ನು ಮಾಡಬೇಕು. ಬಲೆ ಬೆಳೆಯಾಗಿ ಬೆಳೆದ ಬೆಂಡೆಕಾಯಿಯಿಂದ ಮೂತಿ ಹುಳುಗಳನ್ನು ಕೈಯಿಂದ ಸಂಗ್ರಹಿಸಿ ನಾಶಪಡಿಸಬೇಕು. ರಿಂಗ್ ವಿಧಾನದ ಮೂಲಕ ರಂಜಕ ಮತ್ತು ಪೊಟ್ಯಾಶ್

ಗೊಬ್ಬರಗಳನ್ನು ಒದಗಿಸಬೇಕು. 75 ದಿನಗಳ ಬೆಳೆಗೆ 100 ಪಿಪಿಎಂ ಸ್ಯಾಲಿಸಿಲಿಕ್ ಆಮ್ಲವನ್ನು ಸಿಂಪಡಿಸಬೇಕು. ರಸ ಹೀರುವ ಕೀಟಗಳನ್ನು ನಿಯಂತ್ರಿಸಲು ಫ್ಲೋನಿಕಾಮಿಡ್ 50 WG @ 0.4 ಗ್ರಾಂ ಪ್ರತಿ ಲೀಟರ್ ನೀರಿಗೆ ಅಥವಾ ಡಯಾಫೆಂಥಿಯುರಾನ್ 50 WP @ 1.2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿ. ಗುಲಾಬಿ ಕಾಯಿ ಕೊರಕದ ಚಟುವಟಿಕೆಯನ್ನು ಗಮನಿಸಲು ಎಕರೆಗೆ 2 ರಂತೆ ಲಿಂಗಾಕರ್ಷಕ (ಫೆರೋಮೋನ್) ಬಲೆಗಳನ್ನು ಅಳವಡಿಸಿ. ಗುಲಾಬಿ ಕಾಯಿ ಕೊರಕದ ಮರಿಹುಳುಗಳಿರುವ 'ರೋಸೆಟ್' ಹೂವುಗಳನ್ನು (ಅರಳದೆ ಮುಚ್ಚಿಕೊಂಡಿರುವ ಹೂವುಗಳು) ನಾಶಪಡಿಸಿ. ಹತ್ತಿಯ ಕಾಪು (ಮೊಗ್ಗು) ಮತ್ತು ಹೂವುಗಳು ನೈಸರ್ಗಿಕವಾಗಿ ಉದುರುವುದನ್ನು ತಪ್ಪಿಸಲು ಎನ್ ಎ ಎ @ 4 ಮಿಲಿ / 10 ಲೀಟರ್ ನೀರಿನಲ್ಲಿ ಬೆರೆಸಿ ಎಲೆಗಳ ಮೇಲೆ ಸಿಂಪಡಿಸಿ. ಆಲ್ಟರ್ನೇರಿಯಾ ರೋಗವನ್ನು ನಿರ್ವಹಿಸಲು (ಪೈರಾಕ್ಲೋಸ್ಟ್ರಾಬಿನ್ 5% + ಮೆಟಿರಾಮ್ 55%) WG @ 3.5 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿ.

ರಾಯಚೂರಿನಲ್ಲಿ, ಭೂಮಿ ಒಣಗುವುದನ್ನು ತಡೆಯಲು ರೈತರು ಕಳೆ ತೆಗೆಯುವಿಕೆ ಮತ್ತು ಅಂತರ ಬೇಸಾಯದ ಕೆಲಸಗಳಿಗೆ ಆದ್ಯತೆ ನೀಡುವಂತೆ ಸಲಹೆ ನೀಡಲಾಗಿದೆ. ನೀರಾವರಿ ಸೌಲಭ್ಯ ಸೀಮಿತವಾಗಿದ್ದಲ್ಲಿ, ಹೂಬಿಡುವ ಮತ್ತು ಕಾಯಿ ಕಟ್ಟುವ ಹಂತದಲ್ಲಿ ಬೆಳೆಯ ಉಳಿವಿಗೆ ಅತ್ಯಗತ್ಯವಾದ ಒಂದು ನೀರಾವರಿಯನ್ನು ಒದಗಿಸಿ. ದೀರ್ಘಕಾಲದ ಮಳೆಯ ಅಭಾವದಿಂದಾಗಿ ಬೆಳೆಯು ತೇವಾಂಶದ ಕೊರತೆಯಿಂದ ಬಳಲುತ್ತಿದ್ದರೆ, 10 ದಿನಗಳ ಅಂತರದಲ್ಲಿ ಎಕರೆಗೆ 2 ಕೆ.ಜಿ. ಯಷ್ಟು '13:00:45' ರಸಗೊಬ್ಬರವನ್ನು 150 ರಿಂದ 200 ಲೀಟರ್ ನೀರಿನಲ್ಲಿ ಬೆರೆಸಿ ಎರಡು ಬಾರಿ ಎಲೆಗಳ ಮೇಲೆ ಸಿಂಪಡಿಸಿ. ರಸ ಹೀರುವ ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಠ ಮಟ್ಟವನ್ನು ಮೀರಿದಾಗ, ಶಿಫಾರಸು ಮಾಡಲಾದ ಪ್ರಮಾಣದ 'ಫ್ಲೋನಿಕಮಿಡ್ 50% WG' (4 ಗ್ರಾಂ / 10 ಲೀಟರ್ ನೀರಿಗೆ) ಅನ್ನು ಸಿಂಪಡಿಸಿ. ಹಿಟ್ಟು ತಿಗಣೆ ಬಾಧೆಯನ್ನು ನಿಯಂತ್ರಿಸಲು, ಪ್ರತಿ ಲೀಟರ್ ನೀರಿಗೆ 2.5 ಮಿ.ಲೀ. 'ಪ್ರೊಫೆನೋಫಾಸ್ 50 EC' ಅಥವಾ 0.3 ಮಿ.ಲೀ. 'ಇಮಿಡಾಕ್ಲೋಪ್ರಿಡ್ 17.8 SL' ಅನ್ನು ಸಿಂಪಡಿಸಿ. ಬಿತ್ತನೆ ಮಾಡಿದ ಆರಂಭಿಕ ಬೆಳೆಯಲ್ಲಿ ಅರ್ಧ ಸೊರಗು ರೋಗ ಕಂಡುಬಂದಲ್ಲಿ ಕಾರ್ಬೆಂಡಜಿಮ್ 50% WP@1 ಗ್ರಾಂ ಮತ್ತು 1% ಯೂರಿಯಾವನ್ನು ಸಸ್ಯದ ಬುಡದಲ್ಲಿ ಸಿಂಪಡಿಸಬೇಕು. ಹಲವಾರು ರೈತರ ಹೊಲಗಳಲ್ಲಿ ಹತ್ತಿ ಬಿಡಿಸುವುದು ಪ್ರಾರಂಭವಾಗಿದೆ. ಸಂಪೂರ್ಣವಾಗಿ ತೆರೆದ, ಶುಚಿಗೊಳಿಸಿದ ಮತ್ತು ಒಣಗಿದ ಹತ್ತಿಯನ್ನು ನಿಯಮಿತ ಅಂತರದಲ್ಲಿ ಬಿಡಿಸಬೇಕು, ಆರ್ದ್ರ ಪರಿಸ್ಥಿತಿಗಳಲ್ಲಿ ಹತ್ತಿ ಬಿಡಿಸುವುದನ್ನು ನಿಲ್ಲಿಸಬೇಕು ಮತ್ತು ಕೊಯ್ಲು ಮಾಡಿದ ಹತ್ತಿಯಲ್ಲಿ ನಾರಿನ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಸ್ವಚ್ಛ, ಶುಷ್ಕ ಸ್ಥಳದಲ್ಲಿ ಸಂಗ್ರಹಿಸಬೇಕು. ಸಕಾಲಿಕ ಮತ್ತು ಎಚ್ಚರಿಕೆಯಿಂದ ಕೊಯ್ಲು ಮಾಡಿದ ನಂತರ ಗುಲಾಬಿ ಕಾಯಿ ಹುಳುಗಳ ಬಾಧೆ ಮತ್ತು ಇತರ ಋತುವಿನ ಕೀಟಗಳ ನಿಯಮಿತ ಮೇಲ್ವಿಚಾರಣೆ ಮಾಡಬೇಕು. ಬೆಳೆಯ ಸ್ಥಿತಿ, ಕಾಯಿಗಳ ಸಂಖ್ಯೆ ಮತ್ತು ಆರ್ಥಿಕ ಲಾಭಗಳನ್ನು ನಿರ್ಣಯಿಸಿದ ನಂತರವೇ ರಾಸಾಯನಿಕಗಳನ್ನು ಉಪಯೋಗಿಸಬೇಕು.

ಚಾಮರಾಜನಗರದಲ್ಲಿ ಅಂತಿಮ ಹಂತದ ಕೊಯ್ಲು ನಡೆಯುತ್ತಿದ್ದು ಯಾವುದೇ ರಾಸಾಯನಿಕ ಸಿಂಪಡಣೆಯ ಅಗತ್ಯವಿಲ್ಲ.

ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ

ಕನ್ನಡ ಅನುವಾದ

ಡಾ. ನೀಲಕಂಠ ಸ. ಹಿರೇಮನಿ